**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಸಿ.ಸಿ.ನಂ.**2220/2022**
ದಿನಾಂಕಃ **16.11.2022**

ಪಿರ್ಯಾದಿ ಃ ಎಸ್ ಈರಪ್ಪ
ಬಿನ್ ಸಿದ್ದಪ್ಪ,
63 ವರ್ಷ,
ವಾಸಃ ಬಿ ಕೊಡಿಹಳ್ಳಿರಸ್ತೆ, ಬೀರೂರು ಹೋಬಳಿ,
ಬೀರೂರು ಟೌನ್, ಕಡೂರು ತಾಲ್ಲೂಕು.

ವಿರುದ್ಧ

ಆರೋಪಿ ಃ ಜಿ.ಕೆ.ಸುರೇಶ್
ಬಿನ್ ಲೇಟ್ ಕೃಷ್ಣಮೂರ್ತಿ,
40 ವರ್ಷ, ಕೃಷ್ಣ ಟೈಲರ್, ಟಿ.ಬಿ. ರಸ್ತೆ,
ಹಳೇಪೇಟೆ, ಕಡೂರು ಟೌನ್.
ವಾಸಃ ಜಯಮ್ಮ ಹೊನ್ನಪ್ಪ, ಮನೆ ನಂ.28,
ಮೈಲಾರಲಿಂಗೇಶ್ವರ ನಿಲಯ, ವಾರ್ಡ್ ನಂ.44,
ಎ.ಪಿ.ಎಂ.ಸಿ(ಹಳೆ) ಯಶವಂತಪುರ, ಬೆಂಗಳೂರು.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **251** ರ ಅಡಿಯಲ್ಲಿ ಆರೋಪಣಾ ಸಾರಾಂಶಃ

ಆರೋಪಿಯಾದ ನೀವು ದಿನಾಂಕ 10.04.2022 ರಂದು ಕರ್ನಾಟಕ ಗ್ರಾಮೀಣ ಬ್ಯಾಂಕ್, ಕಡೂರು ಶಾಖೆಯಿಂದ ಪಡೆದ ರೂ.1,98,000/- ಸಾಲದ ಮೊತ್ತವನ್ನು ತೀರುವಳಿ ಮಾಡಲು ಫಿರ್ಯಾದುದಾರರಿಂದ ರೂ.2,00,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನೀವು ದಿನಾಂಕ 05.05.2022 ರಂದು ಕರ್ನಾಟಕ ಗ್ರಾಮೀಣಾ ಬ್ಯಾಂಕ್, ಕಡೂರು ಶಾಖೆಯ ಚೆಕ್ ಸಂಖ್ಯೆ 052854 ಅನ್ನು ರೂ.2,00,000/- ಗಳಿಗೆ ಪಿರ್ಯಾದುದಾರರಿಗೆ ಬರೆದು ಕೊಟ್ಟಿದ್ದು, ಅದನ್ನು ಫಿರ್ಯಾದುದಾರರು ಅವರ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಡೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ

ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ಅವರ ವಕೀಲರ ಮೂಲಕ ನಿಮಗೆ ದಿನಾಂಕ 25.05.2022 ರಂದು ನೋಟಿಸನ್ನು ಜಾರಿಗೊಳಿಸಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 28.05.2022 ರಂದು ಜಾರಿಯಾಗಿದ್ದು, ಸದರಿ ನೋಟೀಸಿಗೆ ನೀವು ಸುಳ್ಳು ಉತ್ತರವನ್ನು ನೀಡಿ ಚೆಕ್ಕಿನ ಹಣವನ್ನು ಮರುಪಾವತಿಸಿರುವುದಿಲ್ಲ, ಆದುದರಿಂದ ನೀವು ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ **138** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಪ್ರಶ್ನೆ-1ಃ ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆ-2ಃ ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ?

ಉತ್ತರಃ

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-
(ಸವಿತರಾಣಿ ಹೆಚ್.ವಿ)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

ಆರೋಪಿ ಸಹಿಃ